**ಓ ಎಸ್ ನಂಃ 200-17**
**ಪಿ ಡಬ್ಲ್ಯೂ ಃ 1**

**ದಿಃ 30-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ**

**30.** ನಾನು ದಾವಾ ಆಸ್ತಿಯ ಮಾಲೀಕ ಎಂದು ಹೇಳುತ್ತಿದ್ದು ಆದ್ದರಿಂದ ಕೃಷ್ಣಪ್ಪರವರಿಗೆ ಆದ ಖರೀದಿ ಪತ್ರಗಳು ದಿನಾಂಕಃ 14-12-2015 ಮತ್ತು 28-12-2015 ರ ಕ್ರಯಪತ್ರಗಳು ಯಾವ ಕಾರಣಕ್ಕೆ ಈ ದಾವೆಯಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ದಾವಾ ಆಸ್ತಿಗೆ ಸಂಬಂದಿಸಿದಂತೆ ಕ್ರಯದ ಕರಾರು ಪತ್ರ ನನ್ನ ಹೆಸರಿಗೆ 2007 ರಲ್ಲಿ ಆಗಿದ್ದು ನಂತರ ಈ ಕ್ರಯಪತ್ರಗಳು ಆಗಿರುತ್ತವೆ ಆದ ಕಾರಣ ಪ್ರಶ್ನೆ ಮಾಡಿರುತ್ತೀನಿ ಎಂದು ಹೇಳುತ್ತಾರೆ. ದಾವಾ ಆಸ್ತಿ ಅಸ್ತಿತ್ವದಲ್ಲಿರುವುದಿಲ್ಲ ಅದಕ್ಕೆ ಸುಳ್ಳು ಚಕ್ಕುಬಂದಿಯನ್ನು ತೋರಿಸಿ ಯಾವುದೇ ಮೊಜಿಣಿ ಮತ್ತು ಕಂದಾಯ ದಾಖಲೆಗಳು ಇಲ್ಲದೇ ಇದ್ದರೂ ಸಹ ಒಂದು ಸುಳ್ಳು ಡಿಕ್ರಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 08-12-2007 ಕ್ಕೆ ನನಗೆ ಕ್ರಯಪತ್ರ ಆಗಿಲ್ಲ ನನ್ನ ಹೆಸರಿಗೆ ಕೋರ್ಟ್ ಡಿಕ್ರಿಯಾಗಿದ್ದು ಕ್ರಯದ ಕರಾರು ಪತ್ರ ಆಗಿರುತ್ತದೆ. ದಾವಾ ಆಸ್ತಿಗೆ ಮತ್ತು ದಿನಾಂಕಃ 14-12-2015 ಮತ್ತು 28-12-2015 ರ ಆಸ್ತಿ ಒಂದೇ ಇರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳಿಗೆ ಸಂಬಂದಿಸಿದಂತೆ ಕೇಳಿದ ಪರಿಹಾರಕ್ಕೆ ನಾನು ನ್ಯಾಯಾಲಯದ ಶುಲ್ಕ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದ ಮೂರನೇ ಪರಿಹಾರಕ್ಕೆ ಸಂಬಂದಿಸಿದಂತೆ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 14-12-2015 ಮತ್ತು 28-12-2015 ರ ಕ್ರಯಪತ್ರಗಳ ಮೊತ್ತ ಗೊತ್ತಿಲ್ಲ. ನಾನು ದಿನಾಂಕಃ 14-12-2015 ಮತ್ತು 28-12-2015 ರ ಕ್ರಯಪತ್ರಗಳ ಬಗ್ಗೆ ಕೇಳಿದ ಪರಿಹಾರಕ್ಕೆ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿ ಈ ದಾವೆಯನ್ನು ಮುಂದುವರೆಸಬೇಕಾಗುತ್ತದೆ ಎಂದರೆ ಆ ಬಗ್ಗೆ ಪರಿಹಾರ ಕೇಳಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 14-12-2015 ಮತ್ತು 28-12-2015 ರ ಕ್ರಯಪತ್ರಗಳು ಕೃಷ್ಣಮೂರ್ತಿರವರ ಹೆಸರಿಗೆ ಆದ ನಂತರದ ವರ್ಷದಲ್ಲಿ ನ್ಯಾಯಾಲಯದ ಮುಖಾಂತರ ದಿನಾಂಕಃ 08-08-2016 ರಂದು ನನ್ನ ಹೆಸರಿಗೆ ಕ್ರಯಪತ್ರ ಆಗಿರುತ್ತದೆ ಎಂದರೆ ನಿಜ. 4 ನೇ ಪ್ರತಿವಾದಿಯ 2 ಕ್ರಯಪತ್ರಗಳಲ್ಲಿ ನನಗೆ ಸೇರಿದ 9 ಗುಂಟೆ ಜಮೀನು ಸೇರಿರುತ್ತದೆ. 4 ನೇ ಪ್ರತಿವಾದಿಯ 2 ಕ್ರಯಪತ್ರಗಳ ಆಸ್ತಿಯಲ್ಲಿ ದಾವಾ ಆಸ್ತಿ ಬರುತ್ತದೆ ಎಂದು ತೋರಿಸಲು ನಾನು ಕ್ರಯಪತ್ರ, ಖಾತೆ ಮತ್ತು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 4 ನೇ ಪ್ರತಿವಾದಿಗೆ ಆದ ಎರಡು ಕ್ರಯಪತ್ರಗಳ

ಆಸ್ತಿಗಳ ಚಕ್ಕುಬಂದಿಯ ಈ ದಿಕ್ಕಿನಲ್ಲಿ ನನ್ನ ಆಸ್ತಿ ಬರುತ್ತದೆಂದು ಬರೆಸಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ದಾವಾ ಆಸ್ತಿ 4 ನೇ ಪ್ರತಿವಾದಿಯ ಕ್ರಯಪತ್ರಗಳ ಆಸ್ತಿಯಲ್ಲಿ ಸೇರಿದ್ದರೆ ಆ ಆಸ್ತಿಗಳನ್ನು ಸಹ ನಾನು ಈ ದಾವೆಯಲ್ಲಿ ಸೇರಿಸುತ್ತಿದ್ದೆ ಆದ ಕಾರಣ ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ 62 ರ ವಿಸ್ತೀರ್ಣ 2 ಎಕರೆ 09 ಗುಂಟೆ ಖರಾಬು ಸೇರಿ ಇರುತ್ತದೆ. ಒ ಎಸ್ ನಂ 363/2012 ರ 6 ನೇ ಖಂಡಿಕೆಯಲ್ಲಿ ಹೇಳಿದ ದಾಖಲೆಗಳು ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟ ಮಾಲೀಕರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಒ ಎಸ್ ನಂ 363/2012 ರ ದಾವೆಯ ಆದೇಶದಲ್ಲಿ ನಾನು ಕೇಳಿದ ದಾಖಲೆಗಳನ್ನು ಒದಗಿಸಿಕೊಟ್ಟು ಕ್ರಯಪತ್ರವನ್ನು ಮಾಡಿಕೊಡಬೇಕು ಎಂದು ತೀರ್ಪು ಆಗಿರುತ್ತದೆ ಎಂದರೆ ನಿಜ. 5 ರಿಂದ 9 ನೇ ಪ್ರತಿವಾದಿಗಳ ಆಸ್ತಿಯನ್ನು ಗುರುತಿಸುವ ಬಗ್ಗೆ ಕಂದಾಯ ದಾಖಲೆಗಳು ಮತ್ತು ಸರ್ವೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 18-06-1969 ರಲ್ಲಿ ಸೈಯದ್ ರಸೂಲ್ ರವರ ಕುಟುಂಬದಲ್ಲಿ ವಿಭಾಗ ಪತ್ರ ಆಗಿರುತ್ತದೆ ಎಂದು ನಾನು ಹೇಳಿದ್ದು ಅದರ ಪ್ರಕಾರ ಅವರ ಕುಟುಂಬದ 4 ಜನ ಯಾರಿಗೆ ಎಷ್ಟು ವಿಸ್ತೀರ್ಣ ಆಸ್ತಿ ಭಾಗಕ್ಕೆ ಹೋಗಿರುತ್ತದೆ ಎಂದರೆ ನಸ್ಸಿಂ ಉನ್ನಿಸಾರವರಿಗೆ 18 ಗುಂಟೆ ಜಮೀನು ಭಾಗಕ್ಕೆ ಹೋಗಿ ಅವರ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದು ಹೇಳುತ್ತಾರೆ. ದಿನಾಂಕಃ 18-06-1969 ರ ವಿಭಾಗ ಪತ್ರದ ಆಸ್ತಿಗಳ ಚಕ್ಕುಬಂದಿಯಲ್ಲಿ ಇಬ್ರಾಹಿಂ ಎಂದು ಹೆಸರು ಇರುವುದಿಲ್ಲ ಎಂದರೆ ಗೊತ್ತಿಲ್ಲ. ವಿಭಾಗ ಪತ್ರದ ಪ್ರಕಾರ ಸೈಯದ್ ರಸೂಲ್ ರವರ ಕುಟುಂಬದ ನಾಲ್ಕು ಜನರಿಗೂ ಮ್ಯುಟೇಷನ್ ಆಗಿ ಖಾತೆಯಾಗಿರುತ್ತದೆ. ಈ ಬಗ್ಗೆ ಪೋಡಿ, ಮ್ಯುಟೇಷನ್ ಖಾತೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

31. ದಿನಾಂಕಃ 31-03-1934, ದಿನಾಂಕಃ 03-07-1946, ದಿನಾಂಕಃ 25-11-1959, ದಿನಾಂಕಃ 18-06-1969 ಮತ್ತು ದಿನಾಂಕಃ 01-06-1998 ದಾಖಲೆಗಳ ಬಗ್ಗೆ ಹೇಳಲು ಬರುವುದಿಲ್ಲ. ನಾನು ಸ್ಥಳೀಯನಾಗಿದ್ದು ನನಗೆ ಬುದ್ದಿ ಬಂದಾಗಿನಿಂದ ದಾವಾ ಸರ್ವೆ ನಂಬರನ್ನು ನೋಡುತ್ತಾ ಬಂದಿರುತ್ತೇನೆ. 4 ನೇ ಪ್ರತಿವಾದಿ ನಮ್ಮ ಊರಿನ ಸ್ಥಳೀಯರು ಅಲ್ಲ ಎಂದರೆ ನಿಜ. ದಾವಾ ಆಸ್ತಿಯ ಬಗ್ಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳುವ ಮೊದಲು ನಾನು ವಕೀಲರ ಕಡೆಯಿಂದ ಕಾನೂನು ಸಲಹೆ ಪಡೆದಿಲ್ಲ. ನನಗೆ ಪುಟ್ಟರಂಗಯ್ಯ, ಕೆಂಪಯ್ಯ ಮತ್ತು ಅಬ್ದುಲ್ ಖಾದರ್ ಸಾಬ್ ರವರ ಬಗ್ಗೆ ನನಗೆ ಗೊತ್ತಿಲ್ಲ ಕಾರಣ ನಾನು ಕುದೂರಿಗೆ ಬಂದು 33 ವರ್ಷ ಆಗಿರುತ್ತದೆ. ಈ ಮೂವರಿಗೆ ಸರ್ವೆ ನಂ 62 ರಲ್ಲಿ ವ್ಯವಸಾಯದ ಜಮೀನು ಮತ್ತು ಖರಾಬು ಜಮೀನು ಎಷ್ಟು ಇದೆ ಹೇಳಲು ಬರುವುದಿಲ್ಲ. ನನ್ನ ವಾದ ಪತ್ರದಲ್ಲಿ ಯಾವುದೇ ಆಸ್ತಿ ಚಕ್ಕುಬಂದಿಯಲ್ಲಿ ಮೂರು ದಿಕ್ಕಿಗೂ ರಸ್ತೆ ಬರುತ್ತದೆ ಎಂದು ಹೇಳಿಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಕೈ ನಕ್ಷೆ ನನ್ನ ಜಮೀನಿಗೆ ಸಂಬಂದಿಸಿರುತ್ತದೆ. ದಾವಾ ಆಸ್ತಿಗೆ ಮೊಜಿಣಿ ದಾಖಲೆಗಳು ಇದ್ದಿದ್ದರಿಂದ ಕೈ ನಕ್ಷೆ ಅಪ್ರಸ್ತುತ ಎಂದರೆ ಸರ್ಕಾರಿ ದಾಖಲೆಗಳು ಇವೆ

ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನೋಟ್ ಎಂದು ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಹೇಳುವ ದಾವಾ ಆಸ್ತಿ ಸರ್ವೆ ನಂಬರ್ 62 ರಲ್ಲಿ ಮತ್ತು 62/1 ಎ ರಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಸಂಬಂದಿಸಿದಂತೆ ಪರ್ಯಾಯ ದಾಖಲೆಗಳು ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**